**ಪತ್ರಿಕಾ ಪ್ರಕಟಣೆ**

**ವಿಜಯಪುರ**
**ದಿನಾಂಕ: 18.08.2021.**

**1] ಮಹಿಳಾ ಪೊಲೀಸ ಠಾಣೆ ಗುನ್ನೆ ನಂ: 92/2021 ಕಲಂ: ಮಹಿಳೆ ಮತ್ತು ಮಗು ಕಾಣೆ.**

ದಿನಾಂಕ: 16.08.2021 ದಿಂದ 17.08.2021 ದಿನಾಂಕದ ವರೆಗಿನ :23:00 ಗಂಟೆಯಿಂದ 02:01 ಗಂಟೆಯ ನಡುವಿನ ಅವಧಿಯಲ್ಲಿ ಇದರಲ್ಲಿ ಕಾಣೆಯಾದ ಕಾಣೆಯಾದ ಮಹಿಳೆ : ಶಿಲ್ಪಾ ಗಂಡ ಸಂತೋಷ ದಾನಪ್ಪಗೋಳ, ವಯಾ: 23 ವರ್ಷ, ಉದ್ಯೋಗ: ಮನೆ ಕೆಲಸ ಮತ್ತು ಮಗ ಮಹೇಶ ವಯಾ: 3 ವರ್ಷ ಸಾ॥ ಕೋಲ್ಹಾರ. ತನ್ನ ಮಗ ಮಹೇಶ ವಯಾ: 3 ವರ್ಷ ಇವನಿಗೆ ಕರೆದುಕೊಂಡು ಯಾರಿಗೂ ಹೇಳದೆ ಕೇಳದೆ ಮನೆಯಿಂದ ಎಲ್ಲಿಯೋ ಹೋಗಿ ಕಾಣೆಯಾಗಿರುತ್ತಾರೆ. ಕಾಣೆಯಾಗಿರುವ ಶಿಲ್ಪಾ ಇವರದು ಸದೃಡ ಮೈಕಟ್ಟು, ದುಂಡು ಮುಖ, ಸಾದಕಪ್ಪು ಮೈಬಣ್ಣ, ಕಪ್ಪು ತಲೆಕೂದಲು, ಎತ್ತರ 4:10 ಇದ್ದು ಕನ್ನಡ, ಹಿಂದಿ ಭಾಷೆ ಮಾತನಾಡುತ್ತಾಳೆ. ಮನೆಯಿಂದ ಹೋಗುವಾಗ ಕೆಂಪು ಬಣ್ಣದ ಚೂಡಿದಾರ ಧರಿಸಿದ್ದು, ಮಹೇಶನಿಗೆ ನೀಲಿ ಬಣ್ಣದ ಟಿ ಶರ್ಟ ಮತ್ತು ಚಾಕಲೇಟ ಬಣ್ಣದ ಪ್ಯಾಂಟ ಧರಿಸಿಕೊಂಡು ಹೋಗಿರುತ್ತಾಳೆ. ಸದರಿಯವರಿಗೆ ಇಲ್ಲಿಯ ವರೆಗೆ ತಪಾಸ ಮಾಡಿದ್ದು ಸಿಕ್ಕಿರುವದಿಲ್ಲ. ತಪಾಸಣೆ ಮಾಡಿಕೊಡಬೇಕಾಗಿ ವಗೈರೆ ಪಿರ್ಯಾಧಿಯಲ್ಲಿ ನಮೂದ ಇರುತ್ತದೆ. ಈ ಬಗ್ಗೆ ಸಂತೋಷ ತಂದೆ ಶ್ರೀಶೈಲ ದಾನಪ್ಪಗೋಳ ವಯಾ: 26 ವರ್ಷ ಜಾತಿ: ಹಿಂದೂ ಮಾದರ, ಉಧ್ಯೋಗ: ಖಾಸಗಿ ನೌಕರಿ ಸಾ॥ ಕೋಲ್ಹಾರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 17.08.2021 ರಂದು ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಇಂಡಿ ಗ್ರಾಮೀಣ ಪೊಲೀಸ ಠಾಣೆ ಗುನ್ನಾ. ನಂ: 156/2021 ಕಲಂ: ಮಹಿಳೆ ಕಾಣೆ.**

ದಿನಾಂಕ; 16.08.2021 ರಂದು ರಾತ್ರಿ 10 ಗಂಟೆಯಿಂದ ದಿನಾಂಕ: 17.08.2021 ರಂದು ಬೆಳಗಿನ 05:30 ಗಂಟೆಯ ನಡುವಿನ ಅವಧಿಯಲ್ಲಿ ಇದರಲ್ಲಿ ಕಾಣೆಯಾದ ಕಾಣೆಯಾದವಳ ಹೆಸರು.: 1] ರಜನಿ ಗಂ: ಮಂಜುನಾಥ ಆಳೂರ ವಯಾ: 19 ವರ್ಷ ಸಾ: ಹಿರೇಮಸಳಿ ತಾ: ಇಂಡಿ ಹಿರೇಮಸಳಿ ಗ್ರಾಮದಲ್ಲಿ ಇರುವ ನಮ್ಮ ಮನೆಯಲ್ಲಿಂದ ಎಲ್ಲಿಗೊ ಹೋಗಿ ಕಾಣೆಯಾಗಿದ್ದು ಇರುತ್ತದೆ. ಕಾರಣ ನನ್ನ ಸೊಸೆಗೆ ತಪಾಸಣೆ ಮಾಡಿ ಸಿಗುವ ವ್ಯವಸ್ಥೆಯಾಗಬೇಕು .ಕಾಣೆಯಾದ ನಂತರ ನಾವು ನನ್ನ ಸೊಸೆಗೆ ಅತ್ತಿತ್ತ ಹುಡುಕಾಡುತ್ತಾ ಬಂದಿದ್ದು ಇದುವರೆಗೂ ಅವಳು ಸಿಕ್ಕಿರುವುದಿಲ್ಲ" ಅಂತಾ ವಗೈರೆ ವರದಿಯನ್ನು ಕೊಟ್ಟಿದ್ದು ಅದನ್ನು ಇಂಡಿ ಗ್ರಾಮೀಣ ಪೊಲೀಸ್ ಠಾಣೆಯ ಗುನ್ನೆ ನಂಬರ-156/2021 ಕಲಂ; ಮಹಿಳೆ ಕಾಣೆ ನೇದ್ದಕ್ಕೆ ದಾಖಲು ಮಾಡಿಕೊಂಡು ತನಿಖೆ ಕೈಕೊಂಡಿದ್ದು ಇರುತ್ತದೆ. ಈ ಬಗ್ಗೆ ಸ:ತ: ಅಜಯ ತಂ: ರಾಮಪ್ಪ ಆಳೂರ ವಯಾ: 40 ವರ್ಷ ಸಾ: ಹಿರೇಮಸಳಿ ತಾ: ಇಂಡಿ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 17.08,2021 ರಂದು ಇಂಡಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಝಳಕಿ ಪೊಲೀಸ ಠಾಣೆ ಗುನ್ನಾ. ನಂ: 79/2021 ಕಲಂ: ಮಹಿಳೆ ಕಾಣೆ.**

ದಿನಾಂಕ: 14.08.2021 ರಂದು ರಾತ್ರಿ 08.00 ಗಂಟೆಯ ಸುಮಾರಿಗೆ ಚಡಚಣ ತಾಲೂಕಿನ ದೂಳಖೇಡ ಗ್ರಾಮದ ಶ್ರೀಮತಿ ಶ್ರೀದೇವಿ ಗಂ ಸಂಜಯ ಶಿವಶರಣ ವಯಾ– 32 ವರ್ಷ ಉದ್ಯೋಗ–ಮನೆಕೆಲಸ ಜಾತಿ–ಹಿಂದೂ ಹರಿಜನ ಸಾ॥ ಮಂದ್ರೂಪ ತಾ: ದ.ಸೋಲಾಪೂರ ಜಿ: ಸೋಲಾಪೂರ ರಾಜ್ಯ ಮಹಾರಾಷ್ಟ್ರ ಇವಳು ಪಿರ್ಯಾದಿದಾರರ ಹೆಂಡತಿ ಇದ್ದು ಸದರಿಯವರು ದಿನಾಂಕ: 12–08–2021 ರಂದು ಮುಂಜಾನೆ 09.00 ಗಂಟೆಯ ಸುಮಾರಿಗೆ ಪಿರ್ಯಾದಿದಾರರ ಮನೆಯಿಂದ ಕರ್ನಾಟಕ ರಾಜ್ಯದ ದೂಳಖೇಡ ಗ್ರಾಮದಲ್ಲಿರುವ ತನ್ನ ತಂಗಿಯಾದ ಜಯಶ್ರೀ ಗಂಡ ಶಿವಪ್ಪ ಶಿವಶರಣ ಇವಳ ಮನೆಗೆ ಬಂದಿದ್ದು ನಂತರ ದೂಳಖೇಡ ಗ್ರಾಮದ ಜಯಶ್ರೀ ಶಿವಶರಣ ಇವರ ಮನೆಯಿಂದ ದಿನಾಂಕ: 13–08–2021 ರಂದು ರಾತ್ರಿ 08.00 ಗಂಟೆಯ ಸುಮಾರಿಗೆ ಮಂದ್ರೂಪಗೆ ಹೋಗುತ್ತೇನೆ ಅಂತಾ ಹೇಳಿ ಅವರ ಮನೆ ಬಿಟ್ಟು ಹೋದವಳು ಮರಳಿ ಪಿರ್ಯಾದಿದಾರರ ಮನೆಯಾದ ಮಹಾರಾಷ್ಟ್ರದ ಮಂದ್ರೂಪಕ್ಕೆ ಹೋಗದೆ ಇಲ್ಲಿಯವರೆಗೆ ಮನೆಗೆ ವಾಪಸ್ಸ ಬರದೇ ಎಲ್ಲಿಯೋ ಹೋಗಿ ಕಾಣೆಯಾಗಿರುತ್ತಾಳೆ. ಈ ಬಗ್ಗೆ ಸಂಜಯ್ ತಂ ಶ್ರೀಮಂತ ಶಿವಶರಣ ವಯಾ–38 ವರ್ಷ ಉದ್ಯೋಗ– ಕೂಲಿಕೆಲಸ ಜಾತಿ– ಹಿಂದೂ ಹರಿಜನ ಸಾ: ಮಂದ್ರೂಪ ತಾ: ಜಿ: ಸೋಲಾಪುರ ರಾಜ್ಯ ಮಹಾರಾಷ್ಟ್ರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 17.08,2021 ರಂದು ಝಳಕಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**4] ಇಂಡಿ ಪೊಲೀಸ ಠಾಣೆ ಗುನ್ನಾ. ನಂ: 157/2021 ಕಲಂ: 86, 87 ಕರ್ನಾಟಕ ಅರಣ್ಯ ಇಲಾಖೆ ಕಾಯ್ದೆ-1963 ಮತ್ತು 379 ಐಪಿಸಿ**

ದಿನಾಂಕ;17.08.2021 ರಂದು 17;20 ಗಂಟೆಗೆ ಸ್ಥಳ; ಇಂಡಿ-ಆಲಮೇಲ ಡಾಂಬರ ರಸ್ತೆಯ ಮೇಲೆ ಸಾತಲಗಾಂವ್ ಕ್ರಾಸ್‌ದಲ್ಲಿ. ಇದರಲ್ಲಿ ಆರೋಪಿತರಾದ 1] ಮಲ್ಲಿಕಾರ್ಜುನ ಸಿದ್ದಪ್ಪ ಬಜಂತ್ರಿ ವಯಾ: 30 ವರ್ಷ ಸಾ: ಸಾತಲಗಾಂವ 2] ದುಂಡಪ್ಪ ತಂದೆ: ಯಮನಪ್ಪ ಬಜಂತ್ರಿ ವಯಾ: 25 ವರ್ಷ ಸಾ: ಸಾಲೋಟಗಿ 3] ಹಣಮಂತ ತಂದೆ: ಮಹಾದೇವ ಬಜಂತ್ರಿ ಸಾ: ಸಾಲೋಟಗಿ ಮಾರಾಟ ಮಾಡಲು ಹೋಗುತ್ತಿದ್ದಾಗ ಅ.ನಂ: 1 ಮತ್ತು 2 ನೇದ್ದವರು ಸಿಕ್ಕಿದ್ದು ಒಟ್ಟು 980 ಗ್ರಾಂ ಶ್ರೀಗಂಧದ ಕಟ್ಟಿಗೆ ಚೂರುಗಳು ಅವುಗಳ ಒಟ್ಟು ಕಿಮ್ಮತ್ತು: 1950/-ರೂಪಾಯಿ ಹಾಗೂ 30,000/- ರೂ. ಕಿಮತ್ತಿನ ಒಂದು ಮೋಟಾರ ಸೈಕಲ್, ರೋಖ ಹಣ 43,000/-ರೂಪಾಯಿ ಈ ಪ್ರಕಾರ ಸಿಕ್ಕಿದ್ದು ಸದರಿ ಆರೋಪಿತರ ಮೇಲೆ ನಮ್ಮದು ಸರಕಾರದ ಪರವಾಗಿ ಕಲಂ: 86, 87 ಕರ್ನಾಟಕ ಅರಣ್ಯ ಇಲಾಖೆ ಕಾಯ್ದೆ-1963 ಮತ್ತು 379 ಐಪಿಸಿ ನೇ ಪ್ರಕಾರ ಪಿರ್ಯಾದಿ ಇರುತ್ತದೆ. ಈ ಪಿರ್ಯಾದಿಯ ಸಂಗಡ ಸಿಕ್ಕ ಆರೋಪಿ ಅ.ನಂ: 1 ಮತ್ತು 2 ನೇದ್ದವರಿಗೆ ಹಾಗೂ ಮುದ್ದೆಮಾಲುಗಳನ್ನು ಹಾಜರುಪಡಿಸಿದ್ದು ಇರುತ್ತದೆ." ಅಂತಾ ವಗೈರೆ ನೀಡಿದ ಫಿರ್ಯಾದವನ್ನು ಇಂಡಿ ಗ್ರಾಮೀಣ ಪೊಲೀಸ್ ಠಾಣೆಯ ಗುನ್ನೆ ನಂಬರ 157/2020 ಕಲಂ; 86, 87 ಕರ್ನಾಟಕ ಅರಣ್ಯ ಇಲಾಖೆ ಕಾಯ್ದೆ-1963 ಮತ್ತು 379 ಐಪಿಸಿ ನೇದ್ದಕ್ಕೆ ದಾಖಲು ಮಾಡಿಕೊಂಡು ತನಿಖೆ ಕೈಕೊಂಡಿದ್ದು ಇರುತ್ತದೆ. ಈ ಬಗ್ಗೆ